



## ಜಾಕಿಚಾನ್ ಮಾರ್ಮಿಕ ನುಡಿ ಹೀಗಿದೆ

ಆಗ ನಾನು ಸಣ್ಣವನಿದ್ದೆ. ಅಪ್ಪ ಕೆಲಸ ಮುಗಿಸಿ ಮನೆಗೆ ಬಂದಾಗ ಅವರ ಬ್ಯಾಗನ್ನು ತೆಗೆದುಕೊಂಡು, ಶೂ ಬಿಚ್ಚಲು ಸಹಾಯ ಮಾಡುತ್ತಿದ್ದೆ, ಸತ್ಕರಿಸುತ್ತಿದ್ದೆ. ಈಗ ನಾನು ಮನೆಗೆ ಹೋದರೂ ಮಗ ಸೋಫಾದ ಮೇಲೆ ಕುಳಿತು ಟಿವಿಯೋ, ಮೊಬೈಲೋ ನೋಡುತ್ತಿರುತ್ತಾನೆ. ನನ್ನನ್ನು ನೋಡಿ ಕೂತಲ್ಲಿಂದಲೇ 'ಹಾಯ್ ಡ್ಯಾಡ್' ಅನ್ನುತ್ತಾನೆ. ಕೂತಲ್ಲಿಂದ ಕದಲುವುದೂ ಇಲ್ಲ.

ಒಬ್ಬ ತಂದೆ ತನ್ನ 15 ವರ್ಷದ ಮಗಳನ್ನು ಕರೆದುಕೊಂಡು ಬಂದಿದ್ದರು. ಮಗಳು ಹೇಳಿದ್ದನ್ನು ಕೇಳುವುದಿಲ್ಲ, ಮತ್ತು ನಿಂದನೆ ಮಾಡುತ್ತಿದ್ದಾಳೆ ಎಂಬುವುದು ಅವರ ಮುಖ್ಯ ದೂರುಗಳಾಗಿದ್ದುವು. ಮಗಳು ಕೌನ್ಸೆಲಿಂಗ್ ಪಡೆಯುವುದಕ್ಕೂ ತಯಾರಿರಲಿಲ್ಲ. ಒತ್ತಾಯದಿಂದ ಕರೆದುಕೊಂಡು ಬಂದಿದ್ದರು. ಆಕೆಯ ಜೊತೆ ಮಾತನಾಡುವಾಗ, ತಾನು ಏನೂ ತಪ್ಪೇ ಮಾಡಿಲ್ಲ ಅಥವಾ ತಾನು ಕೇಳುತ್ತಿರುವುದರಲ್ಲಿ ಅಥವಾ ಇಡುತ್ತಿರುವ ಬೇಡಿಕೆಗಳಲ್ಲಿ ಯಾವುದೇ ತಪ್ಪಿಲ್ಲ ಎಂದು ವಾದಿಸಿದಳು. ಆಮೇಲೆ ಆಕೆಯ ತಂದೆಯ ಜೊತೆಗೆ ವೈಯಕ್ತಿಕವಾಗಿ ಮಾತನಾಡುತ್ತಾ ಅವರ ಬಳಿ ಕೇಳಿದೆ, 'ನಿಮ್ಮಿಂದ ಏನಾದರೂ ತಪ್ಪಾಗಿದೆ ಅಂತ ನಿಮಗೆ ಅನ್ನಿಸುತ್ತದಾ?' ಅಂತ. ಆವಾಗ ಅವರು ಹೇಳಿದ್ದು ಈಗಿನ ಅನೇಕ ಪೋಷಕರಿಗೆ ಅನ್ವಯವಾಗುವಂತಹ ಮಾತಾಗಿತ್ತು. ಅವರೆಂದರು, 'ಈಗ ನನಗೆ ನಾನು ತಪ್ಪು ಮಾಡಿದ್ದೇನೆ ಅಂತ ಅನ್ನಿಸುತ್ತಿದೆ. ಒಬ್ಬಳೇ ಮಗಳು. ಅವಳು ಏನು ಮಾಡಿದರೂ ಯಾವತ್ತೂ ಶಿಕ್ಷಿಸಲಿಲ್ಲ. ಆಕೆ ಏನು ಕೇಳಿದರೂ ಅದನ್ನು ಕೊಡಿಸಿದೆ. ಕಾರಣವೇನೆಂದರೆ, ನಾನು ತೀರಾ ಹಳ್ಳಿಯಲ್ಲಿ ಬೆಳೆದವನು. ನನಗೆ ಎಷ್ಟೋ ಬಾರಿ ಶಾಲೆಗೆ ಹೋಗಲೂ ತೊಂದರೆಗಳಾಗುತ್ತಿದ್ದುವು. ನದಿ ದಾಟಿ ಹೋಗಬೇಕಿತ್ತು. ಆದರೆ ಕೆಲವೊಮ್ಮೆ ಪ್ರವಾಹ ಜಾಸ್ತಿ ಇದ್ದಾಗ ಅದೂ ಸಾಧ್ಯವಾಗುತ್ತಿರಲಿಲ್ಲ. ತುಂಬಾ ಕಷ್ಟಪಟ್ಟು ಓದನ್ನು ಮುಗಿಸಿ ಉತ್ತಮ ಕೆಲಸವನ್ನು ಪಡೆದುಕೊಂಡೆ! ತಾನು ಅನುಭವಿಸಿದ ಕಷ್ಟಗಳಾಗಲೀ, ಕುಂದು ಕೊರತೆಗಳಾಗಲೀ ನನ್ನ ಮಗಳಿಗೆ ಬರಬಾರದು ಎಂಬ ಕಾರಣಕ್ಕೆ ನಾನು ಅವಳಿಗೆ ಯಾವತ್ತೂ ಕಷ್ಟವನ್ನು ತೋರಿಸಲಿಲ್ಲ. ಆದರೆ ಈಗ ನಾನು ತಪ್ಪು ಮಾಡಿದೆನೋ ಅಂತ ಭಾಸವಾಗುತ್ತಿದೆ' ಅಂದರು.

ಇತ್ತೀಚೆಗೆ ಅನೇಕ ಟಿ.ವಿ ಕಾರ್ಯಕ್ರಮಗಳಲ್ಲೂ ಮಕ್ಕಳ ವರ್ತನೆಗಳು ಒಂದಷ್ಟು ವರ್ಷ ಹಿಂದಿನ ಅನುಭವಕ್ಕಿಂತ ಭಿನ್ನವಾಗಿವೆ. ಮುಖ್ಯವಾಗಿ ಎದ್ದು ಕಾಣಿಸುವುದೇನೆಂದರೆ, ಹಿಂದೆ ಮಕ್ಕಳಲ್ಲಿ ಇದ್ದಂತಹ ವಿನಯ ಈಗ ಕಾಣಿಸುತ್ತಿಲ್ಲ. ಬದಲಾಗಿ ಒರಟುತನ ಮತ್ತು ಉದ್ಧಟತನ ಕಾಣಿಸುತ್ತಿದೆ. ಅದನ್ನೇ ಅನೇಕ ಜನರು ಆತ್ಮಸ್ಥೈರ್ಯ ಅಂತಲೂ ಕರೆಯುತ್ತಿದ್ದಾರೆ. ಮಗು ಎದುರುತ್ತರ ಕೊಟ್ಟರೆ, ಅದು ಮಕ್ಕಳ ಸ್ವಭಾವವೇ ಹಾಗೆ, ಮತ್ತು ಅದು ಅವರ ಬುದ್ಧಿವಂತಿಕೆ ಮತ್ತು ಗಟ್ಟಿಗಾರಿಕೆ ಎಂದು ಪರಿಗಣಿಸಲಾಗುತ್ತದೆ. ಇದು ನಿಜವಾಗಿಯೂ ಒಳ್ಳೆಯ ಬೆಳವಣಿಗೆಯೋ ಅಂತ ವಿವೇಚಿಸಬೇಕು. ವಿದ್ಯೆಗೆ ವಿನಯವೇ ಭೂಷಣ ಅನ್ನುವ ಮಾತು ಸಾರ್ವಕಾಲಿಕ ಸತ್ಯ. ಆದರೆ ಯಾವಾಗ ವಿದ್ಯೆಯ ಬಗ್ಗೆ ಅಥವಾ ತನ್ನ ಕೌಶಲ್ಯಗಳ ಕುರಿತು ಗರ್ವ ಬರುತ್ತದೋ, ಆವಾಗ ಅದು ಅಹಂಕಾರಕ್ಕೆ ತಿರುಗಿ, ತನಗಿಂತ ಮೇಲೆ ಯಾರೂ ಇಲ್ಲ ಎನ್ನುವ ಮನೋಭಾವ ಬರುತ್ತದೆ. ಅದರಿಂದಾಗಿ ಇತರರನ್ನು ತುಚ್ಛವಾಗಿ ಕಾಣುವ ಪ್ರವೃತ್ತಿ ಬರುತ್ತದೆ. ಜೊತೆಗೆ ಟಿ.ವಿ.ಯಲ್ಲಿ ಒಂದಷ್ಟು ಕಾಣಿಸಿಕೊಂಡು ಜನಪ್ರಿಯತೆ ಬಂದರೆ, ಅನೇಕರಿಗೆ ನೆಲ ಕಾಣುವುದಿಲ್ಲ. ನಭಕ್ಕೆ ನೆಗೆಯುವುದು ಎಷ್ಟು ಆಹ್ಲಾದದಾಯಕವೋ ಅಷ್ಟೇ ಅಪಾಯಕಾರಿ ಕೂಡ! ಒಂದು ವೇಳೆ ಮತ್ತೆ ನೆಲದ ಮೇಲೆ ಇಳಿಯುವುದು ಗೊತ್ತಿಲ್ಲದಿದ್ದರೆ, ಕ್ರಾಷ್ ಲ್ಯಾಂಡಿಂಗ್ ಆಗುವ ಸಾಧ್ಯತೆಯೇ ಹೆಚ್ಚು.

ಮಕ್ಕಳಿಗೆ ವಿನಮ್ರವಾಗಿರಲು ಕಲಿಸಬೇಕು. ಎಷ್ಟೇ ಎತ್ತರಕ್ಕೇರಿದರೂ ಭೂಮಿಯ ಹಿಡಿತವನ್ನು ಕಳೆದುಕೊಳ್ಳಬಾರದು. ಹಿರಿಯರೊಬ್ಬರು ಹೇಳಿದ ಮಾತು ನೆನಪಾಗುತ್ತದೆ. ದ್ವಿಚಕ್ರ ವಾಹನವನ್ನು ಕಲಿಯಲು ಆರಂಭಿಸುವಾಗ, ಮೊದಲು ಹೇಗೆ ನಿಲ್ಲಿಸುವುದು ಅಂತ ಕಲಿಸಬೇಕು. ಆವಾಗ ಎಂತಹ ಸಮಸ್ಯೆ ಬಂದರೂ ಆ ವ್ಯಕ್ತಿಗೆ ವಾಹನವನ್ನು ನಿಯಂತ್ರಣಕ್ಕೆ ತಂದುಕೊಳ್ಳಬಹುದು ಎಂಬುದು ಅವರ ಬುದ್ಧಿಮಾತಾಗಿತ್ತು. ನಮ್ಮ ಜೀವನದಲ್ಲೂ ಅಷ್ಟೆಯೇ! ಯಾವತ್ತೂ ತನ್ನ ಎಲ್ಲೆಯನ್ನು ಮೀರಿ ಹೊರಹೋಗದಂತೆ ಸ್ವನಿಯಂತ್ರಣವನ್ನು ಬೆಳೆಸಿಕೊಳ್ಳಲು ಹಿರಿಯರು ಹೇಳಿಕೊಡಬೇಕು. ಮಕ್ಕಳಿಗೆ ಜೀವನದಲ್ಲಿ ಸುಖದ ಜೊತೆಗೆ ಕಷ್ಟಗಳೂ ಇರುತ್ತವೆ ಎಂಬುವುದನ್ನು ಮನಗಾಣಿಸಬೇಕು.

